ವಿಷಯ ವೈವಿಧ್ಯ (ಒಡೆದುದಣು-ವಿಷರೇಣು ಹೊಡೆದಿದೆ...), ವೈಚಾರಿಕತೆ (ವೇದ ದೇವರ ತುಳಿಯಲೆದ್ದಿದೆ/ ವಾದ ದೇವರ ಪೀಳಿಗೆ), ಭಾವ ವ್ಯಂಜಕತೆ (ಏಳು ಜೀವವೆ! ಏಳು ದೇವನೆ!...), ಛಂದೋ ವಿನ್ಯಾಸ (ಉಸಿರ ಒಳ ಉಸಿರಾಗಿ, ಅಂತ / ರ್ಗತಿಗೆ ಮತಿಯಾಗಿದ್ದರು...), ರಸ ಪರಿಪುಷ್ಟಿಗಳನ್ನು (ಹರಿಯ ಶಂಖವೆ! ಹರನ ಡಕ್ಕೆಯೆ!), ಹಾಗೆಯೇ ಕವನ ತನ್ನೊಡಲಲ್ಲಿ ಹುದುಗಿಸಿಕೊಂಡಿರುವ ಭಾವಾಭಿನಯ ಶಕ್ತಿಯನ್ನು (ಅಸ್ಥಿಮಂಟಪ- ಕರುಳ ತೋರಣ) ಕೂಡಾ ಗಮನಿಸಬೇಕು.

ಕವನ ಹಲವು ನೂತನ ಪ್ರತಿಮೆಗಳಿಂದ ಸಾಮಾಜಿಕ, ಪ್ರಾಕೃತಿಕ ಬೇಗುದಿಯನ್ನು ಕಾಣಿಸುತ್ತದೆ. ಒಡೆದುದಣು- ವಿಷರೇಣು- ಆಧುನಿಕ ವಿಜ್ಞಾನದ ಸಾಧನೆಯಾಗಿ ಅಣುವನ್ನು ಒಡೆಯುವುದು (ಅಣು ಬಾಂಬುಗಳಿಂದ) ಬ್ರಹ್ಮಸೃಷ್ಟಿಗೆ ನಾಶಕಾರಕ ಆಗಬಹುದು. ಅದು ಮಾನವನನ್ನು ದುರಂತಕ್ಕೆ ಹೇಗೆ ತಳ್ಳಬಹುದೆಂಬುದನ್ನು ನೂತನ ಪ್ರತಿಮೆಗಳು ಕಾಣಿಸುತ್ತಿವೆ. ಅವು ಪೌರಾಣಿಕ ಕಾಲದಿಂದಲೂ ಬೆಳೆದು ಬಂದ, ಇಂದಿನ ವಿಜ್ಞಾನವೂ ವಿವರಿಸಿರುವ ನಮ್ಮ ಕೈಲಾಸ ಪರ್ವತ ಕಲ್ಪನೆಯನ್ನೇ ತಲೆಕೆಳಗೆ ಮಾಡಿ ವಿಪ್ಲವ ಸೂಚಿಯಾಗಿದೆ: 'ಹಿಮಗಿರಿಯ ನೆತ್ತಿಯನು ಭೇದಿಸಿ/ ಧುಮುಕೆ ಬೆಂಕಿಯ ತೊರೆಗಳು/ ಸೊಕ್ಕಿ ತಾಂಡವವಾಡದಿರುವುವೆ/ ಕಡಲ ನೆತ್ತರ ತೊರೆಗಳು?'. ಕನ್ನಡ ಕಾವ್ಯ ಕಂಡ ಅತ್ಯಂತ ಭಯಾನಕವಾದ ಚಿತ್ರವಿದು. ಇದರ ಸಾಂಸ್ಕೃತಿಕ ಪ್ರಭಾವವೇ ಹೀನತಮ ಪೂಜೆಯಾಗಿ ಅಸ್ಥಿಮಂಟಪ- ಕರುಳ ತೋರಣಗಳೊಡನೆ ಪ್ರೇತ ದೇವನ ವಿಜಯಯಾತ್ರೆ. ಅದರ ದಾರುಣತೆ ಬಡತನ, ಆತ್ಮಬಲಿಯ ಸಮರ್ಪಣ. ಪ್ರೇತಪೂಜೆಯಲ್ಲಿ ಅಂದರೆ ಸಾವಿನಲ್ಲಿ ಮಾತ್ರ ಎಲ್ಲರಿಗೂ ಏಕಸೂತ್ರ. ಬದುಕೆಂಬುದೇ ಬಹುತ್ವ. ಆದ್ದರಿಂದ ಏಳು ಜೀವನೆ! ಏಳು ದೇವನೆ, ಹಿಂದಿನ ದೇವರುಗಳ ನೆನಪು ಜೀವಪರವಾದ ನಿಲುವಿಗೋಸ್ಕರ ಪ್ರತಿಪಾದಿತ ವಾಗಿದೆ.

ಇಂದಿನ ದೇವರ ರೋಷ ಘೋಷಗಳಿಂದ ಭಯಜ್ವರ ಹಬ್ಬಿದೆ. ಅದು ಭೂಮಿಯ ಗರ್ಭ ತಲಪುವಷ್ಟು ರೋಷಾವಿಷ್ಟವಾಗಿದೆ. ಬುದ್ಧಿ ತಲೆಕೆಳಗಾಗಿದೆ. ಅದರ ಒಟ್ಟು ಪರಿಣಾಮ ನಿಕೃಷ್ಟ ದೇವತಾ ಪೂಜೆ (ಪ್ರೇತ ದೇವ). ಕವನ ಬೆಳೆಯುತ್ತಾ ಹೋದಂತೆ ವರ್ತಮಾನದ ದಾರುಣತೆ ಗೋಚರಿಸಿದರೂ (ಹಿಮಗಿರಿಯ ನೆತ್ತಿಯನು ಭೇದಿಸಿ...) ಕೊನೆಗೂ ಅವರ ಭಾವನಾವಾದ, ಆದರ್ಶದ ನಂಬಿಕೆ ತತ್ವ-ಸತ್ವ-ಸಂಗರಗಳಿಂದ ಜೀವತತ್ವವನ್ನು ಎಚ್ಚರಿಸಿ ರಕ್ಷಿಸಬಲ್ಲದು ಎಂಬ ಆಶಯ ಹೊಂದಿದೆ. ಈ ಆಶಯದ ಬೆಂಬಲವಾಗಿರುವವರು ನಮ್ಮ ಹಿಂದಿನ (ಹಿಂದೆ ಇರುವ) ದೇವರು. ವರ್ತಮಾನದ ಧಾರ್ಮಿಕ ಸ್ಥಿತಿಯ ಡಾಂಭಿಕತೆಯನ್ನು ಗುರುತಿಸುತ್ತಾ ಜೀವಪರವಾದ ಧರ್ಮದ, ದೇವರ (ವಿಚಾರದ) ರಕ್ಷಣೆ ಆಗಬೇಕಾದುದೇ ಹೊರತು ಸಾಮಾಜಿಕ ಆರ್ಭಟದಲ್ಲಲ್ಲ. ಜೀವನದ ಆ ಧರ್ಮಪರ ದುರ್ಗವು, ಅಂತರಂಗದ ಹೃದಯ ಪೀಠದ ಭಾವ ಸಮಗ್ರತೆಯಲ್ಲಿದೆ ಎಂಬುದನ್ನು ತುಸು ನಾಟಕೀಯವಾಗಿ, ಅಂತರಂಗದ ಆಪ್ತತೆಯಲ್ಲಿ ಭಾವಾಭಿನಯಿಸಿ ಕವನ ಕಾಣಿಸುತ್ತವೆ.

ಕಡೆಂಗೋಡ್ಲು ಅವರ ಈ ಕವನವನ್ನು 'ನೂರು ದೇವರನೆಲ್ಲ ನೂಕಾಚೆ ದೂರ/ ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರ' ಎಂದು ಪ್ರಾರಂಭವಾಗುವ ಕುವೆಂಪು ಅವರ 'ಇಂದಿನ ದೇವರು' ಕವನದ ಜೊತೆ ('ಪಾಂಚಜನ್ಯ', 1933); 'ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು / ಇಂದ್ರ ವರುಣರು ಧನದ ಮಿತ್ರ ಪೂಷಣರು' ಎಂದು ಪ್ರಾರಂಭವಾಗುವ ವಿ.ಸೀ. ಅವರ 'ಕಸ್ಮೈ ದೇವಾಯ?' ಕವನ - ಮೊದಲ ಹೆಸರು 'ದೇವರ ಸಾವು' ('ಗೀತಗಳು', 1931); ಹಾಗೂ ಸೇಡಿಯಾಪು ಕೃಷ್ಣಭಟ್ಟ ಅವರ 'ಎಣ್ಣೆ ಹೊಯ್ಯಮ್ಮ ದೀಪಕ್ಕೆ' ಎಂಬ ಸಾಂಸ್ಕೃತಿಕ ಧನಾತ್ಮಕತೆಯನ್ನು ಗುರುತಿಸುವ ಕವನಗಳ ಜೊತೆ ತೌಲನಿಕ ಓದಿನಲ್ಲಿ ಇನ್ನಷ್ಟು ಆಳವಾದ ಅಧ್ಯಯನ ಮಾಡಬಹುದು. ●

